ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸಂಡೂರು.

ಸಿ. ಸಿ. ಸಂಖ್ಯೆ **286/2021** ಸಿ.ಡಬ್ಲೂ **03**, ಪಿ.ಡಬ್ಲೂ **03**

| | | |
|---|---|---|
| ಸಾಕ್ಷಿಯ ಹೆಸರು | - ಬಾಲಾಜಿ | ದಿನಾಂಕ 03-07-2023 |
| ತಂದೆಯ ಹೆಸರು | - ಸುರೇಶ | ರಂದು ಪ್ರಮಾಣ ವಚನ |
| ವಯಸ್ಸು | - 35 ವರ್ಷ | ಮಾಡಿಸಲಾಯಿತು. |
| ಉದ್ಯೋಗ | - ಖಾಸಗಿ ನೌಕರ | |
| ವಾಸ ಸ್ಥಳ | - ಕೂರೆಕುಪ್ಪ | |

**ಮುಖ್ಯ ವಿಚಾರಣೆ ಸಸಅ ರವರಿಂದ**

* * * *

ಈ ಪ್ರಕರಣದ ಬಗ್ಗೆ ನನಗೆ ಏನು ಗೊತ್ತಿರುವುದಿಲ್ಲ. ನಾನು ಆರೋಪಿಯನ್ನು ನೋಡಿರುವುದಿಲ್ಲ. ಸುಮಾರು 2 ವರ್ಷಗಳ ಹಿಂದೆ ಠಾಣೆಗೆ ಹೋಗಿದ್ದಾಗ ಪೋಲಿಸರು ನನ್ನ ಸಹಿಯನ್ನು ಪಡೆದಿರುತ್ತಾರೆ. ಸಾಕ್ಷಿಯು ನಿಪಿ 2 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ 2 ಸಿ ಎಂದು ಗುರುತಿಸಲಾಯಿತು. ತನ್ನ ಸಮಕ್ಷಮದಲ್ಲಿ ಯಾವುದೆ ಮಸ್ತುಗಳನ್ನು ಜಪ್ತು ಪಡೆಸಿಕೊಂಡಿರುವುದಿಲ್ಲ. ನಿಪಿ 2 ರಲ್ಲಿ ಬರೆದ ವಿಷಯಗಳು ನನಗೆ ಗೊತ್ತಿರುವುದಿಲ್ಲ.

**ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ರವರು ಅನುಮತಿ ಕೋರಿರುತ್ತಾರೆ, ಅನುಮತಿಸಲಾಯಿತು.**

**ಪಾಟೀ ಸವಾಲು: ಮಾನ್ಯ ಸ.ಸ.ಅ. ರವರಿಂದ.**

ದಿಃ **20-5-2021** ರಂದು ಸಂಜೆ **6.30** ರಿಂದ **7** ರ ಸಮಯದಲ್ಲಿ ಪೋಲಿಸರು ನನ್ನನ್ನು ಮತ್ತು ಚಾಸಾ **2** ರವರನ್ನು ಬಳ್ಳಾರಿ ಹೊಸಪೇಟೆ ರಸ್ತೆಯ ಹತ್ತಿರ ಇರುವ ಅರ್ ಅರ್ ಡಾಬಾದಲ್ಲಿ ಪಂಚನಾಮೆಗೆ ಕರೆಸಿದ್ದರು ಎಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ ಆರೋಪಿತ ಒಂದು ಪ್ಲಾಸ್ಟಿಕ ಚೀಲದಲ್ಲಿ **180** ಎಂ ಎಲ್ ನ **8** ಪಿ.ಎಂ ವಿಸ್ಕಿ **2** ಪ್ಯಾಕೇಟ್ ಗಳು , **180** ಎಂ ಎಲ್ ನ **5** ಬ್ಯಾಗ್ ಪೇಪರ್ ವಿಸ್ಕಿ ಪಾಕೇಟ್ ಗಳು, **180** ಎಂ ಎಲ್ ನ ರಾಯಲ್ ಸ್ಟ್ಯಾಂಗ್ **4** ಬಾಟಲಿಗಳು ಮತ್ತು **180** ಎಂ ಎಲ್ ನ ಇಂಪಿಯರ್ ಬ್ಲೂಯ್ಯ **4** ಬಾಟಲಿಗಳು ಮತ್ತು ಆರೋಪಿ ಬಳಿ ಇದ್ದ ನಗದು ಹಣ ರೂ. **250/-** ನ್ನು ನಮ್ಮ ಸಮಕ್ಷಮ ಪಂಚನಾಮೆ ಮಾಡಿ ಜಪ್ತು ಪಡೆಸಿಕೊಂಡರು ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ ಏನು ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇದೆ.**

**ಪ್ರ.ದ.ನ್ಯಾ.ದಂ., ಸಂಡೂರು.**